ಶ್ರೀಮತಿ ಅಂಬುಬಾಯಿ ಅಂಧ ಬಾಲಕಿಯರ ವಸತಿಯುತ ಶಾಲೆ ಕಲಬುರಗಿ.

ಸಂಸ್ಥಾಪಕರ ಮನದಾಳದ ಮಾತು

ಆತ್ಮೀಯ ಓದುಗರೆ,

ಶ್ರೀಮತಿ ಅಂಬುಬಾಯಿ ವಸತಿಯುತ ಶಾಲೆಯನ್ನು ಈ ಜಾಲ ತಾಣದ ಮೂಲಕ ಪರಿಚಯಿಸಲು ನನಗೆ ಅತ್ಯಂತ ಹರ್ಷವೆನಿಸುತ್ತದೆ.

ದೃಷ್ಟಿಯನ್ನು ಕಳೆದುಕೊಂಡು ಹತಾಶನಾದ ನನಗೆ ನನ್ನ ಭವಿಷ್ಯವನ್ನು ರೂಪಿಸಿದ ಮಾತೋಶ್ರೀ ಅಂಬುಬಾಯಿಯವರು ಫೆಬ್ರುವರಿ 18, 2006ರಂದು ದೈವಾಧೀನರಾದರು. ಕತ್ತಲೆಯ ಬದುಕಿಗೆ ಬೆಳಕು ಕೊಟ್ಟ ಅವರ ಹೆಸರನ್ನು ಚಿರಸ್ಮರಣೀಯವಾಗಿರಿಸಬೇಕೆಂಬ ಹೆಬ್ಬಯಕೆಯು ನನ್ನ ಮನಸ್ಸಿನಲ್ಲಿ ಮೂಡಿತು. ಆದರೆ ಮನದಿಚ್ಛೆಯನ್ನು ಹೇಗೆ ಈಡೇರಿಸಬೇಕೆಂಬುದೇ ಒಂದು ದೊಡ್ಡ ಸವಾಲಾಗಿತ್ತು. ಆಗ ನನ್ನ ಮನದಲ್ಲಿ ಹೊಳೆದ ವಿಚಾರವೆಂದರೆ, ಅಂಧ ಮಹಿಳೆಯರಿಗೆ ಶಿಕ್ಷಣ ಕೊಡುವುದಕ್ಕಾಗಿ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಶಾಲೆಯಿರಲ್ಲಿಲ್ಲಾ ಅವರ ಹೆಸರಿನಲ್ಲಿ ಒಂದು ಶಾಲೆಯನ್ನು ಪ್ರಾರಂಭಿಸಬೇಕೆಂದು ದೃಢಸಂಕಲ್ಪ ಮಾಡಿದೆ.

ಆಗ ಎದುರಾದ ಸಮಸ್ಯೆಗಳು ಒಂದೆರಡಲ್ಲಾ ಅವೆಲ್ಲವನ್ನು ನೀಗಿಸಿಕೊಂಡು ನನ್ನ ಮನೆಯ ಒಂದು ಭಾಗದಲ್ಲಿ ಶಾಲೆಯನ್ನು ಪ್ರಾರಂಭಿಸಿದೆ. ವಿದ್ಯಾರ್ಥಿನಿಯರ ಊಟ ಉಪಚಾರಕ್ಕಾಗಿ ನನ್ನ ಸಂಬಳದಲ್ಲಿ ಅಷ್ಟೀಷ್ಟನ್ನು ಉಳಿಸಿ ವೆಚ್ಚವನ್ನು ಭರಿಸತೊಡಗಿದೆ. ನಂತರದ ಮೂರು ವರ್ಷಗಳವರೆಗೆ ಜಿಲ್ಲಾ ಪಂಚಾಯಿತಿಯಿಂದ ಸ್ವಲ್ಪ ಅನುದಾನವು ಬರತೊಡಗಿತು. ಆದರೆ ಈ ಶಾಲೆಗೆ ರಾಜ್ಯ ಸರಕಾರದಿಂದ ಅನುದಾನ ಪಡೆದುಕೊಳ್ಳಲು ಸಾಕಷ್ಟು ಹೋರಾಟ ಮಾಡಬೇಕಾಯಿತು.

ಮಾರ್ಚ 29 2011 ನಮ್ಮ ಶಾಲೆಯ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವ ದಿನ ಏಕೆಂದರೆ, ಅಂದು ರಾಜ್ಯ ಸರಕಾರವು ನಮ್ಮ ಬೇಡಿಕೆಯನ್ನು ಮನ್ನಿಸಿ ಪೂರ್ಣ ಪ್ರಮಾಣದ ಅನುದಾನವನ್ನು ಮಂಜೂರು ಮಾಡಿತು. ಹೀಗೆ ಅನೇಕ ಏಳು ಬೀಳುಗಳನ್ನು ಕಾಣುತ್ತಾ ಕಲ್ಲು ಮೂಳ್ಳುಗಳ ಹಾದಿಯಲ್ಲಿ ಪಯಣಿಸಿ ಸ್ನೇಹಿತರ, ಹಿತೈಷಿಗಳ ಸಹಾಯ ಸಹಕಾರದಿಂದ ಗುಲಬರ್ಗಾ ನಗರದಲ್ಲಿ ಈ ಶಾಲೆಯು ತಲೆಯೆತ್ತಿ ನಿಂತಿತು.

ಮುಂದಿನ ದಿನಗಳಲ್ಲಿ ಈ ಶಾಲೆಯನ್ನು ಕೇವಲ ಕರ್ನಾಟಕ ರಾಜ್ಯದಲ್ಲಿ ಅಷ್ಟೇ ಅಲ್ಲ ಇಡೀ ಭಾರತದಲ್ಲಿಯೇ ವೈಶಿಷ್ಟಮಯವಾದ ಶಿಕ್ಷಣ ಸಂಸ್ಥೆಯನ್ನಾಗಿ ರೂಪಿಸಬೇಕೆಂಬುದು ನನ್ನ ಆಸೆಯಾಗಿದೆ. ಇದು ಕೇವಲ ತಮ್ಮೆಲ್ಲರ ಸಹಕಾರದಿಂದ ಮಾತ್ರ ಸಾಧ್ಯ. ಈ ಸಂಸ್ಥೆಯು ಉನ್ನತ ಮಟ್ಟಕೇರಲು ಹಿಂದಿನಂತೆ ಮುಂದೆಯು ಸಹ ತಾವುಗಳು ಸಹಾಯ, ಸಹಕಾರದ ಅಮೃತ ಹಸ್ತವನ್ನು ನೀಡುತ್ತಿರಿ ಎಂದು ನಾನು ಆಶಿಸುತ್ತೇನೆ.

ಧನ್ಯವಾದಗಳೂಂದಿಗೆ,

ಇಂತಿ

ದತ್ತು ಅಗರವಾಲ್.

ನಮ್ಮ ಶಾಲೆ.

ಪೂಜ್ಯ ಶ್ರೀಶರಣಬಸವೇಶ್ವರರ ಹಾಗೂ ಸೂಫಿ ಸಂತ ಹಜರತ ಖಾಜಾ ಬಂದೇನವಾಜರ ಕರ್ಮಭೂಮಿ ಕಲಬುರ್ಗಿ. ಬಹುಮನಿ ಸುಲ್ತಾನರ ರಾಜಧಾನಿಯಾಗಿ ಮೆರೆದು ನಂತರ ನಿಜಾಮರ ಆಡಳಿತ ಕಾಲದಲ್ಲಿ ವಿಭಾಗೀಯ ಕೇಂದ್ರವಾಗಿ ಸಾಮಾಜಿಕ, ಶೈಕ್ಷಣಿಕ, ಸಂಸ್ಕೃತಿಕ, ಹಾಗೂ ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಹಿರಿಮೆ ಪಡೆದ ಐತಿಹಾಸಿಕ ನಗರ ಕಲಬುರ್ಗಿ. ಕರ್ನಾಟಕ ಏಕಿಕರಣದ ನಂತರ ಹೈದ್ರಬಾದ ಕರ್ನಾಟಕ ಪ್ರದೇಶವೆಂದು ಕರೆಯಲಾಗುವ ಆರು ಜಿಲ್ಲೆಗಳ ಪೈಕಿ ಪ್ರಾಮುಖ್ಯತೆಯನ್ನು ಪಡೆದುಕೊಂಡ ಮಹಾನಗರ ಕಲಬುರ್ಗಿ.

ಕಿತ್ತು ತಿನ್ನುವ ಬಡತನ, ದಾರಿದ್ರ್ಯ ಪ್ರಾದೇಶಿಕ ಅಸಮಾನತೆ ರಾಜ್ಯದಲ್ಲಿ ಆಡಳಿತ ನಡೆಸಿದ ವಿವಿಧ ಸರ್ಕಾರಗಳು ಕೊಟ್ಟ ಬಳುವಳಿಯಿಂದಾಗಿ ಶಾಶ್ವತವಾಗಿ ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿಯನ್ನು ಹೊತ್ತಿರುವದು ಇಲ್ಲಿಯ ಜನರ ದೌರ್ಭಾಗ್ಯ

ನಿರುದ್ಯೋಗ, ಅನಕ್ಷರತೆ, ಇಲ್ಲಿನ ಜನರ ದಿನನಿತ್ಯದ ಸಮಸ್ಯೆಗಳು ವಿಕಲಚೇತನರೂ ಸಹ ಈ ಸಮಸ್ಯೆಗಳಿಗೆ ಹೊರತಾಗಿಲ್ಲ. ಇದನ್ನು ಮನಗಂಡ ಕೆಲವು ಅಂಗವಿಕಲರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಹೈದ್ರಬಾದ ಕರ್ನಾಟಕ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘವನ್ನು 1990ರಲ್ಲಿ ಸ್ಥಾಪಿಸಿದರು. ವಿವಿಧ ಸ್ವರೂಪದ ಅಂಗವಿಕಲತೆಯನ್ನು ಹೊಂದಿರುವ ಜನರಿಗೆ ನ್ಯಾಯವನ್ನು ದೊರಕಿಸಿಕೊಡುವದು, ಅವರ ವಿದ್ಯಾಭ್ಯಾಸಕ್ಕಾಗಿ ಶಾಲೆಗಳನ್ನು ಸ್ಥಾಪಿಸುವದು, ಅವರ ಪುನರ್ವಸತಿಗಾಗಿ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುವದು, ಹಾಗೂ ಅಂಗವಿಕಲರ ಹಕ್ಕುಗಳ ರಕ್ಷಣೆ, ಈ ಸಂಘದ ಧ್ಯೆಯೋದ್ಧೇಶಗಳಾಗಿವೆ. ವಿಕಲಚೇತನ ಮಹಿಳೆಯರ ಶೈಕ್ಷಣಿಕ ಅವಶ್ಯಕತೆಗಳನ್ನು ಅರಿತುಕೊಂಡ ಈ ಸಂಘ ಕಲಬುರ್ಗಿ ಮಹಾನಗರದಲ್ಲಿ ಶ್ರೀಮತಿ ಅಂಬುಬಾಯಿ ಅಂಧ ಬಾಲಕಿಯರ ವಸತಿಯುತ ಶಾಲೆಯನ್ನು ಸ್ಥಾಪಿಸಿದೆ.

ಹಿನ್ನೆಲೆ

ಭಾರತದಲ್ಲಿ ಮಹಿಳೆಯರ ಪರಿಸ್ಥಿತಿಯು ಅತ್ಯಂತ ಶೋಚನೀಯವಾಗಿದೆ. ಅದರಲ್ಲಿಯೂ ಅಂಧ ಹೆಣ್ಣು ಮಕ್ಕಳ ಸ್ಥಿತಿಯು ಅತ್ಯಂತ ದಯಾನೀಯವಾಗಿದೆ. ಇವರಿಗೆ ಒಳ್ಳೆಯ ಶಿಕ್ಷಣ ತರಬೇತಿ, ಉದ್ಯೋಗ ಅವಕಾಶಗಳು ದೊರಕಿಸಿಕೊಟ್ಟರೆ ಇತರರಂತೆ ಸಬಲರಾಗಿ ಸ್ವಾವಲಂಬಿ ಜೀವನ ನಡೆಸಬಲ್ಲರು ಈ ನಿಟ್ಟಿನಲ್ಲಿ ಶ್ರೀಮತಿ ಅಂಬುಬಾಯಿ ಅಂಧ ಬಾಲಕಿಯರ ವಸತಿಯುತ ಶಾಲೆಯು ಶ್ರಮಿಸುತ್ತಿದೆ. ಈ ಹಿಂದೆ ಗುಲಬರ್ಗಾ ನಗರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಂಧ ಹೆಣ್ಣು ಮಕ್ಕಳ ಖಾಸಗಿ ಶಾಲೆಯನ್ನು ಅದರ ಆಡಳಿತ ಮಂಡಳಿಯವರು ಹಠಾತ್ತನೆ ಮುಚ್ಚಿ ಬಿಟ್ಟದ್ದರು. ಇದರ ಪರಿಣಾಮವಾಗಿ ಅಂಧ ಬಾಲಕಿಯರ ಸ್ಥಿತಿ ಡೋಲಾಯಮಾನವಾಯಿತು. ಅಲ್ಲದೆ ಅವರ ಪಾಲಕರ ನೆಮ್ಮದಿಯನ್ನು ಹಾಳುಮಾಡಿತು. ಅಂಧ ಬಾಲಕಿಯರ ಮತ್ತು ಪಾಲಕರ ದುರ್ದಸೆಯನ್ನು ಮನಗಂಡು ಹೈದ್ರಾಬಾದ ಕರ್ನಾಟಕ ಅಂಗವಿಕಲರ ಕ್ಷೇಮಾಭವೃದ್ಧಿ ಸಂಘವು

ಅಂಧ ಹೆಣ್ಣುಮಕ್ಕಳ ಸಲುವಾಗಿ ಹೊಸದಾದ ಶಾಲೆಯನ್ನು ಪ್ರಾರಂಭಿಸುವ ಕಾರ್ಯಕ್ಕೆ ಕೈ ಹಾಕಿತು. ತತ್ಪರಿಣಾಮವಾಗಿ ಗುಲಬರ್ಗಾ ನಗರದಲ್ಲಿ 2007 ರಲ್ಲಿ ಕರ್ನಾಟಕ ಸರಕಾರದ ಅಂಗವಿಕಲರ ಕಲ್ಯಾಣ ಇಲಾಖೆಯ ಅನುಮತಿಯನ್ನು ಪಡೆದು ಶ್ರೀಮತಿ ಅಂಬುಬಾಯಿ ಅಂಧ ಬಾಲಕಿಯರ ವಸತಿಯುತ ಶಾಲೆಯು ಅಸ್ಥಿತ್ವಕ್ಕೆ ಬಂದಿತು. ಸ್ವತ: ಅಂಧರಾಗಿರುವ ಶ್ರೀದತ್ತು ಅಗರವಾಲರವರು ಅವರ ಮಾತೋಶ್ರೀ ದಿವಂಗತ ಅಂಬುಬಾಯಿಯವರ ಸ್ಮರಣಾರ್ಥವಾಗಿ ಈ ಶಾಲೆಯನ್ನು ಸ್ಥಾಪಿಸಿದರು.

ಶಾಲೆಯ ಪ್ರವೇಶ ನಿಯಮಗಳು

1) ಪ್ರತಿವರ್ಷ ಜೂನ 1ರಿಂದ 31ರವರೆಗೆ ಯಾವುದೇ ಜಾತಿ, ವರ್ಗ, ಅಂತಸ್ತುಗಳ, ಭೇದವಿಲ್ಲದೆ ಅಂಧ ಬಾಲಕಿಯರಿಗೆ ಉಚಿತವಾಗಿ ದಾಖಲಾತಿ.

2) ಮಕ್ಕಳನ್ನು ದಾಖಿಲು ಮಾಡಲು ನೇತ್ರತಜ್ಞ ವೈದ್ಯರ ಪ್ರಮಾಣಪತ್ರ, ಪಾಲಕರ ಆದಾಯ ಪ್ರಮಾಣಪತ್ರ, ಜನ್ಮ ಪ್ರಮಾಣಪತ್ರ ಮತ್ತು ಪಾಸಪೋರ್ಟಅಳತೆಯ 3 ಭಾವಚಿತ್ರಗಳನ್ನು ತರಬೇಕು.

3) ಇಲ್ಲಿ ಉಚಿತ ವಸತಿ, ಆಹಾರ, ಶಿಕ್ಷಣ,ಪಠ್ಯಪುಸ್ತಕ, ಹಾಗೂ ಸಮವಸ್ತ್ರವನ್ನು ನೀಡಲಾಗುತ್ತದೆ.

ಪಠ್ಯಕ್ರಮ

ಸಾಮಾನ್ಯ ಶಾಲೆಗಳು ಅನುಸರಿಸುವ ಪಠ್ಯಕ್ರಮವನ್ನೇ ಇಲ್ಲಿಯೂ ಸಹ ಅಳವಡಿಸಿಕೊಳ್ಳಲಾಗಿದೆ. ಅಂಧ ಮಕ್ಕಳಿಗೆ ಶಿಕ್ಷಣ ನೀಡುವ ತರಬೇತಿ ಹೊಂದಿದ ತಜ್ಞ ಶಿಕ್ಷಕರಿದ್ದಾರೆ. ಪಠ್ಯ ವಿಷಯಗಳ ಜೊತೆಗೆ ಸಂಗೀತ,ಕರಕುಶಲತೆ, ದೈಹಿಕಶಿಕ್ಷಣ, ಯೋಗಾಭ್ಯಾಸ, ಇತ್ಯಾದಿಗಳನ್ನು ಹೆಚ್ಚುವರಿಯಾಗಿ ಕಲಿಸಲಾಗುತ್ತದೆ.

ಕಂಪ್ಯುಟರ ಶಿಕ್ಷಣ

ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಜಗತ್ತು ಅಗಾಧವಾದ ಪ್ರಗತಿಯನ್ನು ಸಾಧಿಸಿದೆ. ಇದು ಕಂಪ್ಯುಟರ ಯುಗ ಪರಾವಲಂಬಿಗಳಾಗಿದ್ದ ಅಂಧರು ಇಂದು ಕಂಪ್ಯುಟರ ಶಿಕ್ಷಣವನ್ನು ಪಡೆದುಕೊಂಡು ಸ್ವಾವಲಂಬಿಗಳಾಗಿ ಬದುಕುತ್ತಿದಾರೆ. The Freedom Scientific ಎಂಬ ಅಂತರ ರಾಷ್ಟೀಯ ಸಂಸ್ಥೆಯು ದೃಷ್ಠಿದೊಷವುಳ್ಳವರಿಗಾಗಿ Job Accessed With Speech.(JAWS) ಎಂಬ ತಂತ್ರಾಂಶವನ್ನು ಕಂಡು ಹಿಡಿದಿದೆ.

ಇದನ್ನು ಬಳಸಿಕೊಂಡು ಅಂಧರು ಸಹ ಗಣಕಯಂತ್ರದಲ್ಲಿ ಪ್ರಗತಿಯನ್ನು ಸಾಧಿಸುತ್ತಿದಾರೆ. ಇದರಿಂದ ಉದ್ಯೋಗವಕಾಶಗಳು ಹೆಚ್ಚಿವೆ. ಈ ನಿಟ್ಟಿನಲ್ಲಿ ನಮ್ಮ ಶಾಲೆಯಲ್ಲಿ ಗಣಕಯಂತ್ರ ಪ್ರಯೋಗಾಲಯವನ್ನು ಸ್ಥಾಪಿಸಲಾಗಿದೆ.

ಪಠ್ಯೇತರ ಚಟುವಟಿಕೆಗಳು

ಮಕ್ಕಳ ಶಾರೀರಿಕ ಮತ್ತು ಭೌತಿಕ ಅಭಿವೃದ್ಧಿಗೆ ಪಠ್ಯೇಭ್ಯಾಸವಲ್ಲದೇ ಸಾಂಸ್ಕೃತಿಕ ಕಲೆಗಳು ಪೂರಕವೆಂದು ಮನಗಂಡುನಮ್ಮ ಶಾಲೆಯಲ್ಲಿಕ್ರೀಡೆ,ಸಂಗೀತವಾದ್ಯಗಳನುಡಿಸುವಿಕೆ,ಹಾಡುಗರಿಕೆ,ಅಭಿನಯ,ಭಾಷಣ,ಚರ್ಚೆ, ಮುಂತಾದವುಗಳನ್ನು ವಿಶೇಷ ತರಭೇತಿಯ ಮೂಲಕ ಕಲಿಸಿ ಆಸಕ್ತಿಯಿರುವ ಮಕ್ಕಳಿಗೆ ಪ್ರೋತ್ಸಾಹಿಸಲಾಗುತ್ತದೆ.

ವಿದ್ಯಾರ್ಥಿನಿಯರಿಗೆ ನಾಯಕತ್ವದ ತರಭೇತಿ

ನಾವು ಪ್ರಜಾಪ್ರಭುತ್ವದ ಯುಗದಲ್ಲಿದ್ದೇವೆ. ಇದರ ಲಕ್ಷಣ ವಿಶೇಷತೆ ತಿಳಿದುಕೊಳ್ಳಲು ಮಕ್ಕಳಲ್ಲಿಯೇ ಒಂದು ಸಂಸತ್ತು ನಿರ್ಮಿಸಿ ಅವರಲ್ಲಿ ವಿವಿಧ ಜವಾಬ್ದಾರಿಯನ್ನು ಹಂಚಿ ಆರೋಗ್ಯಕರ ಸ್ಪರ್ಧಾ ಭಾವನೆಯಿಂದ ಕಾರ್ಯನಿರ್ವಹಿಸುವಂತೆ ಮಾರ್ಗದರ್ಶನ ನೀಡಲಾಗುತ್ತದೆ. ಪ್ರತಿವರ್ಷವೂ ಚುನಾವಣೆಯನ್ನು ನಡೆಸಿ ವಿದ್ಯಾರ್ಥಿನಿಯರ ಮಂತ್ರಿ ಪರಿಷತ್ತನ್ನು ರಚಿಸಲಾಗುತ್ತದೆ. ಅದೇ ರೀತಿ ವಿದಾರ್ಥಿನಿಯರ ಸಮೂಹವನ್ನು ಐದು ಗುಂಪುಗಳಲ್ಲಿ ವಿಂಗಡಿಸಿ ಆ ಗುಂಪುಗಳಿಗೆ ಕರ್ನಾಟಕದಲ್ಲಿ ಹರಿಯುವ ಪ್ರಮುಖ ನದಿಗಳಾದ ಶರಾವತಿ, ಕೃಷ್ಣ, ಕಾವೇರಿ, ತುಂಗಾ, ಭೀಮಾ ಎಂದು ಹೆಸರಿಸಲಾಗಿದೆ. ಪ್ರತಿಯೊಂದು ಗುಂಪಿಗೆ ಒಬ್ಬ ವಿದ್ಯಾರ್ಥಿನಿ ನಾಯಕಿಯಾಗಿದ್ದು ಅವಳು ಆ ಗುಂಪಿನ ಶಿಸ್ತನ್ನು ಕಾಪಾಡುವ ಜವಾಬ್ದಾರಿಯನ್ನು ಹೊಂದಿರುತ್ತಾಳೆ.

ಶಾಲೆಯಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳು

ನಮ್ಮಲ್ಲಿ ವಸತಿ ಸೌಲಭ್ಯವಿದ್ದು ಊಟದ ಕೋಣೆ, ತರಗತಿಕೋಣೆ, ಆಟದ ಮೈದಾನ, ಹಗಲುರಾತ್ರಿ ಸತತವಾಗಿ ಬಿಸಿ ನೀರಿನ ಸೌಲಭ್ಯ, ಶುದ್ಧ ಕುಡಿಯುವ ನೀರಿನ ಸೌಲಭ್ಯಗಳಿದ್ದು ಅನುಕೂಲಕರವಾದ ಪ್ರತ್ಯೇಕತೆಯನ್ನು ಅನುಭವಿಸಲು ಶೌಚಾಲಯಗಳಿವೆ. ಬೆಳಗಿನ ಉಪಹಾರ, ಮಧ್ಯಾನದ ಊಟ, ರಾತ್ರಿ ಊಟವಿದ್ದು, ಪೌಷ್ಟಿಕತೆ, ರುಚಿ, ಶುಚಿ, ಮೂರನ್ನು ಒಳಗೊಂಡಿರುತ್ತದೆ. ಧರಿಸಲು ಸಮವಸ್ತ್ರ ಹಾಸಿಗೆ, ಹೊದಿಕೆಗಳನ್ನು ಮಕ್ಕಳಿಗೆ ಉಚಿತವಾಗಿ ನೀಡಲಾಗುತ್ತದೆ.

ಸಿಬ್ಬಂದಿ ವ್ಯವಸ್ಥೆ.

ನಮ್ಮ ಶಾಲೆಯಲ್ಲಿ 4ಜನ ವಿಷಯ ಶಿಕ್ಷಕರು, 01ಸಂಗೀತ ಶಿಕ್ಷಕರು, 01ದೈಹಿಕಶಿಕ್ಷಕರು ಹಾಗೂ 01ಕರಕುಶಲ ಶಿಕ್ಷಕರು ಹೀಗೆ ಒಟ್ಟು 7ಜನ ಶಿಕ್ಷಕರು, ಒಬ್ಬ ಗೃಹಪಾಲಕಿ ಮತ್ತು ಒಬ್ಬ ದ್ವಿತಿಯ ದರ್ಜೆಸಹಾಯಕಿ ಕಾರ್ಯನಿರ್ವವಹಿಸುತ್ತಿದ್ದಾರೆ. ಇಷ್ಟೇ ಅಲ್ಲದೇ ವಸತಿನಿಲಯದ ನಿರ್ವಹಣೆಗಾಗಿ ಅಡಿಗೆಯವರು ಆಯಾ ಹಾಗೂ ಜವಾನರನ್ನು ನೇಮಿಸಿಕೊಳ್ಳಲಾಗಿದೆ. ಭದ್ರತಾ ಸಿಬ್ಬಂದಿಯವರು ಅಹೋರಾತ್ರಿ ಶಾಲೆಗೆ ರಕ್ಷಣೆಯನ್ನು ಒದಗಿಸುತ್ತಿದ್ದಾರೆ. ಇಲ್ಲಿನ ಎಲ್ಲಾ ಸಿಬ್ಬಂದಿಯವರು ನಿಸ್ವಾರ್ಥವಾಗಿ ಮಕ್ಕಳ ಸರ್ವತೋಮುಖ ಏಳಿಗೆಯ ದೃಷ್ಟಿಯಿಂದ ಪ್ರಾಮಾಣಿಕ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಉಚಿತ ಆರ್ಯೋಗ್ಯ ತಪಾಸಣೆ ಮತ್ತು ಇತರ ಸೌಕರ್ಯಗಳು

1) ಆರ್ಯೋಗ್ಯವೇ ಭಾಗ್ಯ ಆದ್ದರಿಂದ ಮಕ್ಕಳ ಆರ್ಯೋಗ್ಯವನ್ನು ನಿವೃತ್ತ ವೈದ್ಯಾಧಿಕಾರಿಗಳ ಸಂಘದವರಿಂದ ನಿಯಮಿತವಾಗಿ ತಪಾಸಣೆ ಮಾಡಲಾಗುತ್ತಿದೆ.

2) ಪ್ರತಿ ವರ್ಷವೂ ಎಸ್.ನಿಜಲಿಂಗಪ್ಪ ದಂತವೈದ್ಯಕೀಯ ಕಾಲೇಜಿನ ವತಿಯಿಂದ ಶಿಬಿರವನ್ನು ಏರ್ಪಡಿಸಿ ಮಕ್ಕಳಿಗೆ ಉಚಿತವಾಗಿ ಔಷಧೋಪಚಾರ ನೀಡಲಾಗುತ್ತಿದೆ.

3) ಅದರಂತೆ ಬಸವೇಶ್ವರ ಆಸ್ಪತ್ರೆಯಲ್ಲಿ ಮಕ್ಕಳ ಕಣ್ಣಿನ ತಪಾಸಣೆ ನಡೆಸಲಾಗುತ್ತಿದೆ.

ಗಣ್ಯರ ಭೇಟಿ

ನಮ್ಮ ಶಾಲೆಗೆ ಹಲವಾರು ಗಣ್ಯ ವ್ಯಕ್ತಿಗಳು ಭೇಟಿ ನೀಡಿ ತಮ್ಮ ಮೆಚ್ಚುಗೆಯನ್ನು ಸೂಚಿಸಿದ್ದಾರೆ. ಅವರಲ್ಲಿ ಪ್ರಮುಖರೆಂದರೆ, ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು ಹಾಗೂ ಮಾನವ ಹಕ್ಕುಗಳ ಆಯೋಗದ ಮಾಜಿ ಸದಸ್ಯರಾದ ಡಾ. ಶಿವರಾಜ್ ಪಾಟೀಲ್, ಕರ್ನಾಟಕ ಸರಕಾರದ ಮಾಜಿ ಸಚಿವೆಯವರಾದ ಶೋಭಾ ಕರಂದ್ಲಾಜೆ, ಪೂಜ್ಯಶ್ರೀಬಸವಾನಂದ ಸ್ವಾಮಿಗಳು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ನಿರ್ದೇಶಕರು ಶಾಲೆಗೆ ಭೇಟಿ ನೀಡಿದ್ದಾರೆ.

ಸಾಮಾಜಿಕ ಅರಿವು ಮೂಡಿಸುವಿಕೆ.

ಅಂಗವಿಕಲತೆ ಸಾಧನೆಗೆ ಅಡ್ಡಿಯಲ್ಲ ಆತ್ಮಬಲ ಮತ್ತು ಏನೆಲ್ಲವನ್ನು ಸಾಧಿಸುತ್ತೇನೆಂಬ ಛಲ ಅವರಲ್ಲಿ ಇರಬೇಕು ಕೀಳರಿಮೆ ಬೆಳಸಿಕೊಳ್ಳದೆ ತಾನು ಯಾರಿಗಿಂತಲು ಕಡಿಮೆ ಇಲ್ಲ ಎಂಬ ಮನೋಭಾವದಿಂದ ಸಾಗಬೇಕು ಅಂಗವಿಕಲರಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಲು ಸಮಾಜವು ಮುಕ್ತ ಅವಕಾಶ ಮಾಡಿಕೊಡಬೇಕು ಈ ನಿಟ್ಟಿನಲ್ಲಿ ಅಂಧರ ಜಾಣ್ಮೆ ಕೌಶಲ್ಯಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ನಮ್ಮ ಶಾಲೆಯು ಆಕಾಶವಾಣಿ ದೂರದರ್ಶನ ಸಾರ್ವಜನಿಕ ಸಭೆ ಸಮಾರಂಭಗಳ ಮೂಲಕ ಪ್ರತಿಭಾ ಪ್ರದರ್ಶನ ಚಟುವಟಿಕೆಗಳನ್ನು ನಡೆಸುತ್ತಿದೆ.

ಇತ್ತೀಚೆಗೆ ಆಯೋಜಿಸಲಾಗಿದ್ದ ಗುಲಬರ್ಗಾ ಉತ್ಸವದಲ್ಲಿ ನಮ್ಮ ಶಾಲೆಯ ಅಂಧ ಬಾಲಕೀಯರು ಕಣ್ಣಿದ್ದವರೊಂದಿಗೆ ನೃತ್ಯ ಸ್ಪರ್ಧೆಯಲ್ಲಿ ಭಾಗವಹಿಸಿ ತೃತೀಯ ಬಹುಮಾನವನ್ನು ಪಡೆದಿದ್ದಾರೆ ಅದರಂತೆ ಹುಬ್ಬಳ್ಳಿಯಲ್ಲಿ ನಡೆದ ರಾಜ್ಯಮಟ್ಟದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ತೃತೀಯ ಹಾಗೂ ರಾಯಚೂರಿನಲ್ಲಿ ನಡೆದ ರಾಜ್ಯಮಟ್ಟದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಮತ್ತು ಬಳ್ಳಾರಿಯಲ್ಲಿ ನಡೆದ ಅಂಧರ ರಾಜ್ಯಮಟ್ಟದ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಿ ಓಟದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಪಡೆದು ಶಾಲೆಯ ಕೀರ್ತಿಯನ್ನು ದಶ ದಿಕ್ಕುಗಳಲ್ಲಿ ಬೆಳಗಿದ್ದಾರೆ

ಈ ಶಾಲೆಯಲ್ಲಿ ಗುಲಬರ್ಗಾ,ಬೀದರ, ರಾಯಚೂರ, ಬಿಜಾಪೂರ, ಯಾದಗಿರಿ ಜಿಲ್ಲೆಗಳಿಗೆ ಸೇರಿದ 50 ಕಿಂತ ಹೆಚ್ಚು ಅಂಧ ಬಾಲಕಿಯರು ಪ್ರವೇಶ ಪಡೆದಿದ್ದಾರೆ. ಇವರೆಲ್ಲರೂ ಗ್ರಾಮೀಣ ಹಿನ್ನಲೆಯನ್ನು ಹೊಂದಿದ್ದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳಿಗೆ ಸೇರಿದವರಾಗಿದ್ದು, ಬಡತನ ರೇಖೆಗಿಂತ ಕೆಳಗಿನವರಾಗಿದ್ದಾರೆ. ಇಲ್ಲಿ ವಿದ್ಯಾರ್ಥಿನಿಯರಿಗೆ ಶಿಕ್ಷಣ, ಊಟ, ವಸತಿ, ವಸ್ತ್ರ ಎಲ್ಲವನ್ನು ಉಚಿತವಾಗಿ ಪೂರೈಸಲಾಗುತ್ತದೆ. ಅಷ್ಟೆ ಅಲ್ಲದೆ ಸಂಗೀತ, ಕಂಪ್ಯುಟರ ಶಿಕ್ಷಣ, ಕರಕುಶಲ ಶಿಕ್ಷಣ, ದೈಹಿಕ ಶಿಕ್ಷಣ ಇತ್ಯಾದಿಗಳನ್ನು ಹೇಳಿ ಕೊಡಲಾಗುತ್ತದೆ. ಎಲ್ಲಾ ವಿದ್ಯಾರ್ಥಿನಿಯರಿಗೆ ಶುದ್ಧವಾದ ನೀರು ಒದಗಿಸುವ ಉದ್ದೇಶದಿಂದ ನೀರು ಶುದ್ಧಿಕರಣ ಯಂತ್ರವನ್ನು ಅಳವಡಿಸಲಾಗಿದೆ. ಮತ್ತು ಸೌರಶಕ್ತಿ ಯಂತ್ರದ ಮುಖಾಂತರ ಬಿಸಿನೀರನ್ನು ಪೂರೈಸಲಾಗುತ್ತಿದೆ. ಹೀಗೆ ಸಕಲ ಸೌಲಭ್ಯಗಳನ್ನು ಹೊಂದಿರುವ ಈ ಶಾಲೆ ಅಲ್ಪಾವಧಿಯಲ್ಲಿ ಅಗಾಧವಾದ ಪ್ರಗತಿಯನ್ನು ಸಾಧಿಸಿದೆ. ಇಲ್ಲಿನ ಎಲ್ಲಾ ವಿದ್ಯಾರ್ಥಿನಿಯರು ವಿವಿಧ ಸ್ಪರ್ಧಾಕೂಟಗಳಲ್ಲಿ ಅಪ್ರತಿಮ ಸಾಧನೆ ತೋರಿದ್ದಾರೆ. ಕಣ್ಣಿದ್ದವರೂ ಸಹ ನಾಚಿಸುವ ರೀತಿಯಲ್ಲಿ ಕೋಲಾಟ, ನಾಟಕ, ಜಾನಪದ ನೃತ್ಯ, ಇತ್ಯಾದಿಯಾಗಿ ಹಲವಾರು ಕಲೆಗಳನ್ನು ಪ್ರದರ್ಶಿಸುತ್ತಾರೆ.

ಇಲ್ಲಿ ವ್ಯಾಸಂಗ ಮಾಡುತ್ತಿರುವ ಕೆಲವು ವಿದ್ಯಾರ್ಥಿನಿಯರ ಕುರಿತು ಅಧ್ಯಯನ ಮಾಡಿದಾಗ ಈ ಶಾಲೆಯು ಅವರಿಗೆ ಹೇಗೆ ಪ್ರಯೋಜನಕಾರಿಯಾಗಿದೆ ಎಂಬುದನ್ನು ಅರಿಯಬಹುದು. ಸುರಪುರ ತಾಲೂಕಿನ ಶೆಟ್ಟಕೇರಾ ಗ್ರಾಮದ ಭಾಗ್ಯಶ್ರೀಗೆ ದೃಷ್ಟಿ ಎಲ್ಲರಂತೆ ಇತ್ತು ಉತ್ಸಾಹದಿಂದ ಎಲ್ಲರಂತೆ ಶಾಲೆಗೆ ತೆರಳಿದಳು. ಆದರೆ ನಾಲ್ಕನೇ ತರಗತಿಗೆ ಬರುತ್ತಿದ್ದಂತೆ ದೃಷ್ಟಿ ಕಡಿಮೆಯಾಗುತ್ತಾ ಬಂದಿತು. ಆದರೆ ಏಳನೆ ತರಗತಿಗೆ ಬರುವ ಹೊತ್ತಿಗೆ ಸಂಪೂರ್ಣವಾಗಿ ದೃಷ್ಟಿ ನಿಂತು ಹೋಯಿತು. ಆಗ ಭಾಗ್ಯಶ್ರೀ ಮತ್ತು ತಂದೆ ತಾಯಿಯವರಿಗೆ ದಿಕ್ಕು ತೋಚದಂತಾಯಿತು. ಭಾಗ್ಯಶ್ರೀಗೆ ತನ್ನ ವಿದ್ಯಾಭ್ಯಾಸ ಹೇಗೆ ಮುಂದುವರಿಸಬೇಕೆಂದು ತಿಳಿಯದಾಯಿತು ಆಗ ಅವಳ ನೆರವಿಗೆ ಬಂದದ್ದು ಶ್ರೀಮತಿ ಅಂಬುಬಾಯಿ ಅಂಧ ಬಾಲಕಿಯರ ವಸತಿಯುತ ಶಾಲೆ. ಈಗ ಭಾಗ್ಯಶ್ರೀ ಜೀವನದಲ್ಲಿ ಹೊಸ ಆಸೆ ಚಿಗುರಿದೆ. ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡು ಉಪನ್ಯಾಸಕಿಯಾಗಿ ಸರಕಾರಿ ಸೇವೆಗೆ ಸೇರಬೇಕೆಂಬುದು ಅವಳ ಮಹದಾಸೆ. ಬಣ್ಣ ಬಣ್ಣದ ವಾಯರನ್ನು ಬಳಸಿ ಹೂ ಕುಂಡಗಳನ್ನು ವಿನ್ಯಾಸಗೋಳಿಸುವದು, ಉಲ್ಲನ್ನ ಪರೆದೆ, ಶಾಲು, ಹೆಣಿಕೆ ಮುಂತಾದ ಕಸೂತಿ ಕೆಲಸದಲ್ಲಿ ನಿಪುಣತೆಯನ್ನು ಭಾಗ್ಯಶ್ರೀ ಪಡೆದುಕೊಂಡಿದ್ದಾಳೆ. ಪ್ರಸ್ತುತ ಈ ವಿದ್ಯಾರ್ಥಿನಿಯು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬೇರೊಂದು ಶಾಲೆಯಲ್ಲಿ ಪ್ರವೇಶ ಪಡೆದಿದ್ದಾಳೆ. ಅದೇ ರೀತಿ ಸುರಪುರ ಪಟ್ಟಣದ ಮಲ್ಲಿಕಾರ್ಜುನ ಎಂಬ ವ್ಯಕ್ತಿಗೆ ನಾಗರತ್ನ ಹಾಗೂ ರಾಧಿಕಾ ಎಂಬ ಈರ್ವರೂ ಅಂಧ ಹೆಣ್ಣು ಮಕ್ಕಳಿದ್ದಾರೆ ಆದರೆ ಶಾಲೆಗೆ ಎಲ್ಲಿ ಸೇರಿಸುವದು ಎಂಬುದೇ ದೊಡ್ಡ ಚಿಂತೆಯಾಗಿತ್ತು. ಆಗ ನೆನಪಿಗೆ ಬಂದಿದ್ದೇ ಶ್ರೀಮತಿ ಅಂಬುಬಾಯಿ ಅಂಧ ಬಾಲಕಿಯರ ವಸತಿಯುತ ಶಾಲೆ.

ಇವರ ಕಥೆ ಈ ರೀತಿಯಾದರೆ ಚಿತ್ತಾಪುರ ತಾಲುಕಿನ ಬಸವರಾಜನ ಕಥೆಯೆ ಬೇರೆ ಅದು ಇನ್ನು ಆಘಾತಕಾರಿ. ಈತನಿಗೆ ಪ್ರೀತಿ, ಪ್ರಿಯಾ, ಪುಷ್ಪಾ, ಎಂಬ ಮೂರು ಹೆಣ್ಣು ಮಕ್ಕಳು ದುರ್ದೈವವೆಂದರೆ ಮೂವರು ಜನ್ಮತಃ ಅಂಧರು. ಹೆತ್ತವರು ಬಡವರು. ಮಕ್ಕಳಿಗೆ ಶಿಕ್ಷಣ ಕೊಡಿಸುವದು ಅಸಾಧ್ಯವಾದ ಮಾತು ಆದರೆನಂತೆ ಈ ಅಂಧ ಬಾಲಕಿಯರಿಗೆ ಅಂಬುಬಾಯಿ ವಸತಿಯು ಶಾಲೆಯೇ ಆಶ್ರಯ ತಾಣ.

ಹೀಗೆ ಒಬ್ಬೊಬ್ಬ ವಿದ್ಯಾರ್ಥಿನಿಯರ ಕಥೆ ಹೇಳುತ್ತಾ ಹೋದರೆ ಹೃದಯ ತುಂಬಿ ಬರುತ್ತದೆ. ಕಣ್ಣುಗಳು ಹನಿಗೂಡುತ್ತವೆ. ಈ ಶಾಲೆಯ ಸಂಸ್ಥಾಪಕರಾದ ಶ್ರೀದತ್ತು ಅಗರವಾಲ್‌ರವರ ಪತ್ನಿ ಶ್ರೀಮತಿ ಶೋಭರಾಣಿ ಅಗರವಾಲರವರು ಸಂಸ್ಥೆಯ ಅಧ್ಯಕ್ಷರಾಗಿದ್ದು, ಎಲ್ಲಾ ಅಂಧ ಮಕ್ಕಳನ್ನು ತಮ್ಮ ಮಕ್ಕಳಂತೆ ಪೋಷಣೆ ಮಾಡುತ್ತಾರೆ. ಬೆಳಿಗ್ಗೆಯಿಂದ ರಾತ್ರಿಯವರೆಗೆ ಎಲ್ಲ ಹಂತದಲ್ಲೂ ತಮ್ಮನ್ನು ಅತೀವ ಕಾಳಜಿಯಿಂದ ನೋಡಿಕೊಳ್ಳುವದರಿಂದ ಬಾಲಕಿಯರಿಗೆ ಬೇರೆ ಯಾವ ಕಡೆಗೂ ಮನಸು ನೆನೆಸುವದಿಲ್ಲ ಎಂದು ವಿದ್ಯಾರ್ಥಿನಿಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ರಜಾ ದಿನಗಳಲ್ಲಿಯೂ ಬಾಲಕಿಯರು ತಮ್ಮ ಮನೆಗೆ ಹೋಗದೆ ವಸತಿ ಶಾಲೆಯಲ್ಲಿಯೇ ಇರುವದನ್ನು ನೋಡಿದರೆ ವಸತಿ ಶಾಲೆಯಲ್ಲಿ ಮನೆ ಮಕ್ಕಳಂತೆ ನೋಡಿಕೊಳ್ಳುತ್ತಿರುವದೇ ಪ್ರಮುಖ ಕಾರಣವಾಗಿದೆ. ಹೀಗೆ ಅಂಬುಬಾಯಿ ವಸತಿ ಶಾಲೆಯು ಅಂಧ ಬಾಲಕಿಯರ ಆಶಾಕಿರಣವಾಗಿದೆ.

ಅಂಧ ಮಕ್ಕಳಿಗೆ ಇಷ್ಟೇಲ್ಲಾ ಸಹಾಯ ಸಹಕಾರ ಮಾಡುತ್ತಿರುವ ತೆರೆಯ ಮರೆಯಲ್ಲಿರುವ ಈ ಸಂಸ್ಥೆಯ ಆಧಾರ ಸ್ತಂಭವಾಗಿರುವ ಸಂಸ್ಥೆಯ ಸ್ಥಾಪಕರ ಬಗ್ಗೆ ಒಂದಿಷ್ಟು ಪರಿಚಯ.

ಸಂಸ್ಥಾಪಕರ ಕಿರುಪರಿಚಯ(ಅಪರೂಪದ ಸಾಧಕರು)

ಅಂಗವೈಕಲ್ಯತೆ ಸಾಧನೆಗೆ ಅಡ್ಡಿಯಾಗಲಾರದು ಎಂಬುದು ಎಲ್ಲರಿಗೂ ತಿಳಿದಿರುವ ಮಾತು. ಇದು ಪೂರ್ವ ಜನ್ಮದ ಪಾಪ, ಯಾರದೋ ಶಾಪ, ಅಥವಾ ದೇವರ ಕೋಪದಿಂದ ಬರುವದಿಲ್ಲ. ಇದು ಕೇವಲ ಆಕಸ್ಮಿಕವಷ್ಟೆ. ಅಂಗವಿಕಲತೆ ಹೊಂದಿರುವ ಹಲವಾರು ವ್ಯಕ್ತಿಗಳು ಅಗಾಧವಾದ ಸಾಧನೆ ಮಾಡಿ ನಮ್ಮ ನಡುವೆ ಬದುಕುತ್ತಿದ್ದಾರೆ. ಅನೇಕರು ಉಪನ್ಯಾಸಕರಾಗಿ, ವೈದ್ಯರಾಗಿ, ನ್ಯಾಯವಾದಿಗಳಾಗಿ, ಹಾಗೂ ಸಮಾಜಸೇವಕರಾಗಿ ರಾಷ್ಟ್ರಕ್ಕಾಗಿ ತಮ್ಮದೇ ಆದ ರೀತಿಯಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಅಂಥಹ ಸಾಧಕರಲ್ಲಿ ನಮ್ಮ ನಿಮ್ಮ ನಡುವೆ ಬಾಳಿ ಬೆಳಗುತ್ತಿರುವ ಅಂಧರ ಬಾಳಿಗೆ ದಾರಿ ದೀಪವಾಗಿರುವ ಶ್ರೀ ದತ್ತು ಅಗರವಾಲರವರು ಒಬ್ಬರು.

17 ಮೇ 1957 ರಲ್ಲಿ ಜನಿಸಿದ *ಶ್ರೀ ದತ್ತು ಅಗರವಾಲರವರು* ತಮ್ಮ 3ನೇ ವಯಸ್ಸಿನ ವರೆಗೆ ಸಾಮಾನ್ಯ ಮಕ್ಕಳಂತಿದ್ದರು. ನಂತರ ಕಾಮಾಲೆ ರೋಗಕ್ಕೆ ತುತ್ತಾಗಿ ತಮ್ಮ ಎರಡು ಕಣ್ಣುಗಳ ದೃಷ್ಟಿಯನ್ನು ಕಳೆದು ಕೊಂಡರು. ಬಡತನದ ಬೇಗೆಯಲ್ಲಿ ಬಳಲುತ್ತಿದ್ದ ತಂದೆ ತಾಯಿಯವರಿಗೆ ಸಿಡಿಲು ಬಡಿದಂತಾಗಿತ್ತು. ಆದರೆ ಅವರು ಧೃತಿಗೆಡಲಿಲ್ಲ. ಎಷ್ಟು ಕಷ್ಟವಾದರು ಸರಿ ತಮ್ಮ ಮಗನ ಕಳೆದು ಹೋದ ದೃಷ್ಟಿಯನ್ನು ಸರಿಪಡಿಸುವದಕ್ಕಾಗಿ ಸಾಲ ಸೋಲ ಮಾಡಿ ಹಲವಾರು ಆಸ್ಪತ್ರೆಗಳಿಗೆ ಕರೆದೊಯ್ದರು. ಹೈದರಾಬಾದಿನ ಪ್ರಸಿದ್ದ ಕಣ್ಣಿನ ಆಸ್ಪತ್ರೆಯಾಗಿರುವ "ಸರೋಜನಿ" ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿದರು. ವಿಧಿಯಾಟದ ಮುಂದೆ ಯಾವುದು ನಡೆಯುವದಿಲ್ಲ ಎಂಬುದು ನಿಜ. ಶಸ್ತ್ರ ಚಿಕಿತ್ಸೆ ಫಲಕಾರಿಯಾಗಲಿಲ್ಲ. ಅಂಧತ್ವ ಶಾಶ್ವತವಾಗಿ ಉಳಿದು ಬಿಟ್ಟಿತು. ಈ ಘಟನೆಯಿಂದ ಬಹುವಾಗಿ ನೊಂದುಕೊಂಡ ತಂದೆ ತಾಯಿಗಳಿಗೆ ಕಲಬುರ್ಗಿ ನಗರದಲ್ಲಿ ಅಂಧರ ಶಿಕ್ಷಣಕ್ಕಾಗಿ ಸರಕಾರ ವಿಶೇಷ ಶಾಲೆ ತೆರೆದಿದೆ ಎಂಬ ವಿಚಾರ ತಿಳಿದು ಅತ್ಯಂತ ಹರ್ಷವಾಯಿತು.

ಅವರು ತಮ್ಮ ಅಂಧ ಮಗನನ್ನು ಆ ಶಾಲೆಗೆ ಸೇರಿಸಿದರು. ಹೀಗಾಗಿ ಶ್ರೀ ದತ್ತು ಅಗರವಾಲರವರು ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಆ ಶಾಲೆಯಲ್ಲಿ ಪೂರೈಸಿದರು. ಸರಕಾರಿ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ ಕಲಬುರ್ಗಿ ಯಿಂದ ಪದವಿ ಪಡೆದ ಇವರು ಗುಲಬರ್ಗಾ ವಿಶ್ವವಿದ್ಯಾಲಯದಿಂದ ರಾಜ್ಯಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಕರ್ನಾಟಕ ಲೋಕಸೇವಾ ಆಯೋಗದಿಂದ 1985ರಲ್ಲಿ ರಾಜ್ಯಶಾಸ್ತ್ರ ಉಪಾನ್ಯಾಸಕರ ಹುದ್ದೆಗೆ ಆಯ್ಕೆಗೊಂಡು ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ನೇಮಕಗೊಂಡು ಇಲ್ಲಿಯವರೆಗೆ ಅದೇ ಮಹಾವಿದ್ಯಾಲಯದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಸರಕಾರಿ ನೌಕರಿ ಇವರ ವೃತ್ತಿಯಾಗಿದ್ದರೂ ಸಹ ಸಮಾಜ ಸೇವೆಯನ್ನು ತಮ್ಮ ಪ್ರವೃತ್ತಿಯಾಗಿ ಬೆಳೆಸಿಕೊಂಡಿರುವ ಇವರು ಹುಟ್ಟು ಹೋರಾಟಗಾರರು. ವಿದ್ಯಾರ್ಥಿ ಜೀವನದಲ್ಲಿ ನಾಯಕತ್ವವನ್ನು ವಹಿಸಿ, ಹಲವಾರು ಚಳುವಳಿಗಳಲ್ಲಿ ಭಾಗವಹಿಸಿದ್ದಾರೆ. ಅಂಧರ ಕಲ್ಯಾಣಕ್ಕಾಗಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ.

ಅಂಧ ಮಹಿಳೆಯರ ಶಿಕ್ಷಣಕ್ಕಾಗಿ 2007ರಲ್ಲಿ ತಮ್ಮ ದಿವಂಗತ ಮಾತೋಶ್ರೀಯವರಾದ ಶ್ರೀಮತಿ ಅಂಬುಬಾಯಿಯವರ ಹೆಸರಿನಲ್ಲಿ ಅಂಧ ಬಾಲಕಿಯರಿಗಾಗಿ ವಸತಿಯುತ ಶಾಲೆಯನ್ನು ಪ್ರಾರಂಭಿಸಿ ಅದರ ಪ್ರಗತಿಗಾಗಿ ಅಹೋರಾತ್ರಿ ದುಡಿಯುತ್ತಿದ್ದಾರೆ. 25 ಕ್ಕಿಂತ ಹೆಚ್ಚುಬಾರಿ ರಕ್ತದಾನ ಮಾಡಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಅನೇಕ ಇಂಗ್ಲೀಷ ಮತ್ತು ಕನ್ನಡ ದಿನಪತ್ರಿಕೆಗಳು ಇವರ ಸಾಧನೆಯನ್ನು ಶ್ಲಾಘಿಸಿ ಲೇಖನಗಳನ್ನು ಪ್ರಕಟಿಸಿವೆ. ಇವರ ಸಮಾಜ ಸೇವೆಯನ್ನು ಗುರುತಿಸಿ ಹಲವಾರು ಸರಕಾರಿ ಮತ್ತು ಸರಕಾರೇತರ ಸಂಘ ಸಂಸ್ಥೆಗಳು ಪ್ರಶಸ್ತಿಯನ್ನು ನೀಡಿ ಗೌರವಿಸಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, 2000ನೇ ಇಸವಿಯಲ್ಲಿ ರೋಟರಿ ಕ್ಲಬ್ ಆಫ್ ಗುಲಬರ್ಗಾರವರು ನೀಡಿದ "ಪ್ರಶಂಶನೀಯ ಪ್ರಮಾಣಪತ್ರ" , ಕರ್ನಾಟಕ ರಾಜ್ಯ ಅಂಗವಿಕಲರ ಮಹಾಸಂಘ ಇವರು 1986 ರಲ್ಲಿ ಪ್ರತಿಭಾ ಪುರಸ್ಕಾರ, ಪತ್ರಕರ್ತರ ವೇದಿಕೆ ಬೆಂಗಳೂರವರು 2005 ರಲ್ಲಿ "ಜನಪ್ರಿಯ ಶಿಕ್ಷಕ" ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ. ಲೈನ್ಸಕ್ಲಬ್ ಆಫ್ ಗುಲಬರ್ಗಾರವರು 1996 ರಲ್ಲಿ ನೀಡಿದ ಉತ್ತಮ ಶಿಕ್ಷಕ ಪ್ರಶಸ್ತಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಬೆಂಗಳೂರುರವರು 1995ರಲ್ಲಿ ರಕ್ತದಾನ ಮಾಡಿದ್ದಕ್ಕಾಗಿ ನೀಡಿದ ಪ್ರಮಾಣ ಪತ್ರ, ಇವರ ಉತ್ಕೃಷ್ಟ ಸಮಾಜ ಸೇವೆಯನ್ನು ಮೆಚ್ಚಿ ಗಣರಾಜ್ಯೋತ್ಸವ ಸಮಿತಿ ಗುಲಬರ್ಗಾರವರಿಂದ ಸನ್ಮಾನ, ವಿಶ್ವ ಅಂಗವಿಕಲ ದಿನಾಚರಣೆ ಸಮಿತಿ ಗುಲಬರ್ಗಾರವರಿಂದ ಪ್ರಶಸ್ತಿ ಪತ್ರ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಇವರಿಂದ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಪಡೆದಿರುತ್ತಾರೆ. ಹೀಗೆ ಹಲವಾರು ಪ್ರಶಸ್ತಿಗಳು ಇವರ ಮುಡಿಗೇರಿವೆ. ಇವರ ಸಾಧನೆಯ ಪಯಣ ಹೀಗೆಯೆ ಮುಂದುವರಿಯಲಿ ಎಂದು ಹಾರೈಸೋಣ.

ಶ್ರೀಮತಿ ವಿಜಯಾ ದ್ವಿ.ದ.ಸ
ಶ್ರೀಮತಿ ಅಂಬುಬಾಯಿ ಅಂಧ ಬಾಲಕಿಯರ
ವಸತಿಯುತ ಶಾಲೆ ಗುಲಬರ್ಗಾ.

ಕೃತಜ್ಞತೆಗಳು

ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನಮ್ಮ ಶಾಲೆಯ ಪ್ರಗತಿಗೆ ಹಲವಾರು ಗಣ್ಯರು, ದಾನಿಗಳು, ಸರಕಾರಿ ಅಧಿಕಾರಿಗಳು, ಹಾಗೂ ಸರಕಾರೇತರ ಸಂಘ ಸಂಸ್ಥೆಗಳು ತಮ್ಮ ಸಹಾಯ ಹಸ್ತವನ್ನು ನೀಡಿವೆ.

ಈ ಸಂಸ್ಥೆ ಇಲ್ಲಿಯವರೆಗೆ ಬೆಳೆಯಲು ಅನೇಕರ ಸಹಕಾರ ಪ್ರೋತ್ಸಾಹ ನಮ್ಮ ಜೊತೆಗಿದೆ. ಅವರನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವದು ಅತ್ಯಗತ್ಯ ಡಾ. ಶಾಲಿನಿರಜನೀಶ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳಾಗಿದ್ದಾಗ ಈ ಶಾಲೆಯನ್ನು ಪ್ರಾರಂಭಿಸಲು ಅನುಮತಿಯನ್ನು ನೀಡಿ ಸಹಕರಿಸಿದ್ದಾರೆ. ಅದೇ ರೀತಿ ನಮ್ಮ ಎಲ್ಲ ಕಾರ್ಯಗಳಿಗೂ ಪ್ರೋತ್ಸಾಹಿಸಿ ಸಹಕರಿಸಿದ ಅಂದಿನ ಗುಲಬರ್ಗಾದ ಪ್ರಾದೇಶಿಕ ಆಯುಕ್ತರಾದ ರಜನೀಶ ಗೋಯಲ್. ಈ ಹಿಂದೆ ಗುಲಬರ್ಗಾದಲ್ಲಿ ಜಿಲ್ಲಾಧಿಕಾರಿಗಳಾಗಿದ್ದ ಡಾ. ಆರ್ ವಿಶಾಲ್, ಶ್ರೀಮತಿ ರತ್ನ ಕಲಂ ದಾನಿ ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗುಲಬರ್ಗಾ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳು, ಶ್ರೀ ಬಸವರಾಜ ಪಾಟೀಲ ಸೇಂಡಂ ರಾಜ್ಯಸಭಾ ಸದಸ್ಯರು, ಶ್ರೀ ಶಶೀಲ ನಮೋಶಿ ಮಾಜಿ ವಿಧಾನ ಪರಿಷತ್ ಸದಸ್ಯರು , ಶ್ರೀದತ್ತಾತ್ರೇಯ ಸಿ. ಪಾಟೀಲ್ ರೇವೂರ ಶಾಸಕರು, ನಮ್ಮ ಶಾಲೆಗೆ ನೀವೇಶನವನ್ನು ಕೊಳ್ಳಲು ಎನ್.ಎಸ್.ಎಲ್. ಶುಗರ್ಸ ಲಿಮಿಟೆಡ್ ಭೂಸನೂರು, ತಾ: ಆಳಂದ ಜಿ: ಗುಲಬರ್ಗಾ, ಮಾಸಿಕ ದೇಣಿಗೆ ನೀಡುತ್ತಿರುವ ಕಾಗಿನ ಜನ ಸೇವಾ ಟ್ರಸ್ಟ (ರಾಜಶ್ರೀ ಸಿಮೆಂಟ್ಸ) ಆದಿತ್ಯ ನಗರ ಮಳಖೇಡ್.ಅದರಂತೆ ಮಾಸಿಕ ದೇಣಿಗೆ ನೀಡುತ್ತಿರುವ ಇನ್ನೋರ್ವ ದೇಣಿಗೆದಾರರಾದ ವಿಕಾಟ್ ಸಾಗರ್ ಸಿಮೆಂಟ್ ಪ್ರೈವೇಟ್ ಲಿ. ಬಂಜಾರಾ ಹಿಲ್ಸ್ ಹೈದ್ರಾಬಾದ್, ಇವರನ್ನೆಲ್ಲಾ ಹಾರ್ದಿಕವಾಗಿ ಸ್ಮರಿಸುವುದು ನಮ್ಮ ಆದ್ಯ ಕರ್ತ್ಯವ್ಯವಾಗಿದೆ.

ನೇತ್ರದಾನ ಮಹಾದಾನ

ಸಹೃದಯರೆ ನಮಗೆ ಕಣ್ಣಿಲ್ಲ, ಬೆಳಕು ಎಂದರೇನು ಗೊತ್ತಿಲ್ಲ. ಹೂವಿನ ಚೆಲುವು ನೋಡಲಾಗಲ್ಲ ನೀರಿನ ಅಲೆಗಳ ಚೆಲ್ಲಾಟ ಕಾಣಲ್ಲ ಆದರೆ ನಮಗೆ ಹೃದಯ ಇದೆ. ನಾವು ಹೃದಯದ ಕಣ್ಣಿನಿಂದಲೇ ಬೆಳಕನ್ನು, ಹೂವಿನ ಚೆಲುವನ್ನು, ನೀರಿನ ಚೆಲ್ಲಾಟವನ್ನು ನೋಡುತ್ತೇವೆ. ನಮಗೆ ಆತ್ಮವಿದೆ ಆ ಆತ್ಮದ ವಿಶ್ವಾಸದಿಂದಲೇ ಬದುಕನ್ನು ಅನುಭವಿಸುತ್ತೇವೆ. ನಾವು ಈ ಭೂಮಿಗೆ ಬದುಕಲೆಂದೇ ಬಂದವರು. ಬೊಗಸೆ ಬೆಳಕಿಗಾಗಿ ಕೈ ಒಡ್ಡುತ್ತೇವೆ. ದಯವಿಟ್ಟು ಜ್ಯೋತಿಯಿಂದ ಜ್ಯೋತಿ ಬೆಳಗುವಂತೆ ಮರಣಾನಂತರ ನಿಮ್ಮ ಅಮೂಲ್ಯ ಕಣ್ಣುಗಳನ್ನು ದಾನ ಮಾಡಿ. ನಿಮ್ಮೆರಡು ಕಣ್ಣುಗಳು ಈರ್ವ ಅಂಧರ ಆಶಾಜ್ಯೋತಿಯಾಗಿ ಮಾರ್ಪಡಿಸಿ.

ಧನ್ಯವಾದಗಳು

ವಿ.ಸೂ.:- ನಮ್ಮ ಶಾಲೆಗೆ ಆರ್ಥಿಕವಾಗಿ ದೇಣಿಗೆ ನೀಡಲು ಇಚ್ಛಿಸುವವರು

The Hedmistress, Smt. Ambubai Residential School For Blind Girls, Gulbarga. ಈ ವಿಳಾಸಕ್ಕೆಚೆಕ್/ಡಿ.ಡಿ ಮೂಲಕ ಹಣ ಸಂದಾಯ ಮಾಡಬಹುದು.

ಆನ್ ಲೈನ್ ಮುಖಾಂತರ ಹಣ ಸಂದಾಯ ಮಾಡ ಬಯಸುವವರು ಬ್ಯಾಕ್ ಆಫ್ ಇಂಡಿಯಾ ಗುಲಬರ್ಗಾ, **S.B.A/c No.848410110000213,** ಇಲ್ಲಿಗೆ ನೇರವಾಗಿ ದೇಣಿಗೆಯನ್ನು ಪಾವತಿ ಮಾಡಬಹುದು. **IFSC Code: BKID 0008485.**

ವಿಳಾಸ:-

Smt. Ambubai Residential School for Blind Girls
C/o President, Hydrabad Karnataka Disabled Welfare Society,
H.No. 4-282, Maktampur, Gulbarga-585 101.
M. No. 09535393900
E mail : school.blindgirls@gmail.com
Web Site: www.ambubaischoolforblindgirls.org